ಸೆಲೆಬ್ರಿಟಿ

■ ಹನಿ

## ಪ್ರಾಣ್ ಸಾಹೇಬ್!

ಬರುವ ಮೇ 3ರಂದು ಭಾರತೀಯ ಸಿನಿಮಾಕ್ಕೆ ಬರೋಬ್ಬರಿ 100 ವರ್ಷ ತುಂಬುತ್ತದೆ. ಕರೆಕ್ಟಾಗಿ ಅವತ್ತೇ ನಮ್ಮ ಪ್ರಾಣ್ ಸಾಹೇಬರಿಗೆ 'ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ' ಪ್ರದಾನ. 93ರ ಹರೆಯದ ಪ್ರಾಣಜ್ಞ ಪ್ರಶಸ್ತಿ, ಪುರಸ್ಕಾರಗಳು ಉಂಟು ಮಾಡುವ ರೋಮಾಂಚನದ ಮಜಲನ್ನು ದಾಟಿ ಬಹಳ ವರ್ಷಗಳಾಗಿವೆ. ಅಷ್ಟಾಗಿಯೂ ಪ್ರಾಣ್ ಅವರ ಅಭಿನಯವನ್ನು ಕಳೆದ 67 ವರ್ಷಗಳಿಂದ ಆನಂದಿಸಿಕೊಂಡು ಬಂದ ಅವರ ಅಭಿಮಾನಿಗಳಿಗೆ ಇದೊಂದು ರೋಮಾಂಚನವೇ. 'ಏನು! ಪ್ರಾಣ್ ಸಾಹೇಬರಿಗೆ ಇನ್ನೂ ಫಾಲ್ಕೆ ಸಿಕ್ಕಿಲ್ಲವೆ?!' ಎಂದು ಕೇಳುವವರೇ ಅಧಿಕ. ಅದು ಪ್ರಾಣ್ ಅವರ ಪ್ರತಿಭೆಗೆ ಸಾಕ್ಷಿ.

ಪ್ರಾಣ್ ಕಿಸನ್ ಸಿಕಂದ್ (ಬರ್ತ್‌ಡೇ 12/2/1920) ಹುಟ್ಟಿದ್ದು ಹಳೇ ದೆಹಲಿಯ ಶ್ರೀಮಂತ ಸಿಖ್ ಕುಟುಂಬದಲ್ಲಿ. ಚಿಕ್ಕಂದಿನಲ್ಲೇ ಲೆಕ್ಕದಲ್ಲಿ ಬಲು ಚೂಟಿ. ಹರೆಯ ಬಂದಾಗ ವೃತ್ತಿಪರ ಛಾಯಾಗ್ರಾಹಕನಾಗಬೇಕು ಎಂಬ ಆಸೆ ಮೂಡಿತು. ಎ.ದಾಸ್ ಅಂಡ್ ಕೋ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿ ಶಿಮ್ಲಾಕ್ಕೆ ಹೋದಾತ ಅಲ್ಲಿ ರಾಮಲೀಲಾ ನಾಟಕದಲ್ಲಿ ಸೀತೆಯ ಪಾತ್ರ ಮಾಡಿದ. ಅದೇ ಸಿನಿಮಾದತ್ತ ಕೈಹಿಡಿದು ಎಳೆಯಿತು. ಆಕಸ್ಮಿಕವಾಗಿ ಭೇಟಿಯಾದ ಲೇಖಕ ವಲಿ ಮಹಮ್ಮದ್ ವಲಿ, ಪಂಜಾಬಿ ಸಿನಿಮಾ 'ಯಮ್ಲಾ ಜಾಟ್'ನಲ್ಲಿ ಹೀರೊ ಪಾತ್ರ ಕೊಡಿಸಿದರು. ಅಲ್ಲಿಂದ ಮುಂಬೈಗೆ ಪಯಣ. 1942ರಲ್ಲಿ 'ಖಾನ್‌ದಾನ್' ಹಿಂದಿ ಚಿತ್ರದಲ್ಲಿ ಹೀರೊ. ಏಳು ವರ್ಷಗಳ ಕಾಲ ಹೀರೊ ಪಾತ್ರ ನಿರ್ವಹಿಸಿದ ಬಳಿಕ ಪ್ರಾಣ್ ಹೊರಳಿದ್ದು ವಿಲ್ಲನ್ ಪಾತ್ರಗಳಿಗೆ. ಪ್ರಾಣ್ ಅವರ ವಿಲ್ಲನ್ ಪಾತ್ರಗಳು ಎಷ್ಟು ಖ್ಯಾತಿ ಹೊಂದಿದುವೆಂದರೆ 80ರ ದಶಕದಲ್ಲಿ ತಮ್ಮ ಮಕ್ಕಳಿಗೆ ಪ್ರಾಣ್ ಎಂಬ ಹೆಸರಿಡಲು ಪೋಷಕರು ಹಿಂಜರಿಯುತ್ತಿದ್ದರು! ಇಂತಿದ್ದ ವಿಲ್ಲನ್‌ಗೆ ಚರಿತ್ರ ನಟನ ಪಾತ್ರ ಕೊಟ್ಟು ವೃತ್ತಿ ಜೀವನದ ಮತ್ತೊಂದು ಹೊರಳಿಗೆ ಕಾರಣರಾದದ್ದು ಮನೋಜ್‌ಕುಮಾರ್. 7 ವರ್ಷ ಹೀರೊ, 43 ವರ್ಷಗಳ



ಕಾಲ ವಿಲ್ಲನ್, 16 ವರ್ಷಗಳ ಕಾಲ ಪೋಷಕ ನಟ! ಜಗತ್ತಿನ ಸಿನಿಮಾ ಇತಿಹಾಸದ ಮಟ್ಟಿಗೆ ಇದೊಂದು ದಾಖಲೆಯೇ. ಜಿದ್ದಿ, ವಿಲನ್, ಮಧುಮತಿ, ಜಂಜೀರ್, ಪರಿಚಯ್, ಉಪಕಾರ್, ಕರ್ಜ್, ಬಾಬ್ಬಿ... ಒಟ್ಟು 361 ಸಿನಿಮಾಗಳ ಪಟ್ಟಿ ಮಾಡುವುದು ಸುಲಭವಲ್ಲ!

ಅಷ್ಟಾಗಿಯೂ ಇವತ್ತಿಗೂ ಪ್ರಾಣ್ ಎಂದರೆ ನೆನಪಾಗುವುದು– 'ಯಾರೀ ಹೈ ಈಮಾನ್ ಮೇರೆ..' ಎಂಬ ಸಾರ್ವಕಾಲಿಕ ಹಿಟ್ ಹಾಡು ಮತ್ತು ನೃತ್ಯ. ಬಾಲಿವುಡ್‌ನಲ್ಲಿ ಇವತ್ತು ಎಲ್ಲರೂ ಏಕಕಾಲಕ್ಕೆ ಎದ್ದು ನಿಂತು ಸೆಲ್ಯೂಟ್ ಹೊಡೆಯುವ ನಟ ಪ್ರಾಣ್. ಅದಕ್ಕೆಂದೇ 2010ರಲ್ಲೇ ಸಿಎನ್‌ಎನ್ 'ಏಷ್ಯಾದ ಸಾರ್ವಕಾಲಿಕ 25 ಅತ್ಯುನ್ನತ ನಟರ' ಪಟ್ಟಿಯಲ್ಲಿ ಪ್ರಾಣ್‌ಗೆ ಜಾಗ ಕೊಟ್ಟಿದ್ದು. ಈಗ ತಡವಾಗಿಯಾದರೂ ಫಾಲ್ಕೆ ಅರಸಿಕೊಂಡು ಬಂದಿದೆ. ●

## ಅಶಾಂತ ಆಟಗಾರ

ಕ್ರಿಕೆಟ್ ಎಂದರೆ ಹಣ. ಹಣ ಎಂದರೆ ಜಗಳ, ವೈಮನಸ್ಯ ಮತ್ತು ಹೊಡೆದಾಟ! ಇದು ಈಗ ಕಾಣುತ್ತಿರುವ ದೃಶ್ಯ. ಕಳೆದ ವಾರ ವಿರಾಟ್ ಕೊಹ್ಲಿ ಮತ್ತು ಗೌತಮ್ ಗಂಭೀರ್ ಮೈದಾನದಲ್ಲೇ ಬೈದಾಡಿಕೊಂಡರು. ಅದರ ಮರುದಿನ ಎರಡೇ ತಾಸುಗಳಲ್ಲಿ ಶ್ರೀಶಾಂತ್ ತಮ್ಮ ಟ್ವಿಟ್ಟರ್ ಖಾತೆಯಲ್ಲಿ 44 ಕಾಮೆಂಟು-ಗಳನ್ನು ಹರಿಬಿಟ್ಟ. ಅದೆಲ್ಲವೂ ಐದು ವರ್ಷಗಳ ಹಿಂದೆ ತಮ್ಮ ಮೇಲೆ ಹರ್ಭಜನ್ ಸಿಂಗ್ ನಡೆಸಿದ ಮೈದಾನದಲ್ಲಿ ದಾಳಿಯ ಬಗ್ಗೆ! 'ಅವತ್ತು ಮುಂಬೈ ಇಂಡಿಯನ್ಸ್ ತಂಡ ಸೋತ ಕೂಡಲೇ ಹರ್ಭಜನ್ ನನ್ನ ಕೆನ್ನೆಗೆ ಬಾರಿಸಿದ. ನನ್ನ ಮೇಲೆ ಹಲ್ಲೆ ನಡೆಸಲು ಆತ ಪೂರ್ವಯೋಜನೆ ಮಾಡಿದ್ದ. ಡ್ರೆಸಿಂಗ್ ರೂಮ್‌ನಲ್ಲೂ ಆತ ಹೊಡೆಯಲು ಬಂದಿದ್ದ...' ಎಂದೆಲ್ಲ ಟ್ವೀಟ್ ಮಾಡಿದ ಶ್ರೀಶಾಂತ್, ಅದರಲ್ಲಿ 22 ಕಾಮೆಂಟುಗಳನ್ನು ಅರ್ಧ ಗಂಟೆಯಲ್ಲಿ ಡಿಲೀಟ್ ಮಾಡಿದ! ಐಪಿಎಲ್ ಉದ್ಘಾಟನಾ ಸರಣಿಯಲ್ಲಿ ನಡೆದ ಆ ಘಟನೆಯ ಬಗ್ಗೆ ಈಗ ಶ್ರೀಶಾಂತ್ ಬರೆಯಬೇಕಿತ್ತೆ ಎನ್ನುವುದು ಎಲ್ಲರೂ ಕೇಳುವ ಪ್ರಶ್ನೆ.

ಅವಮಾನವನ್ನು ನುಂಗಿಕೊಳ್ಳುವುದು ಸುಲಭವಲ್ಲ. ಅವತ್ತೇ ಶ್ರೀಶಾಂತ್ ಈ ವಿಷಯವನ್ನು ದೊಡ್ಡದು ಮಾಡಿದ್ದರೆ ಬಹುಶಃ ಭಾರತ ತಂಡದಿಂದಲೇ ಔಟ್ ಆಗುವವನಿದ್ದ! ಹಾಗೆಂದು ಹಿರಿಯ ಆಟಗಾರರೊಬ್ಬರು ಅವತ್ತೇ ಧಮಕಿ ಹಾಕಿದ್ದರಂತೆ. ಮೈದಾನದಲ್ಲಿ ಹೊಡೆದ ಬಳಿಕ ಎಲ್ಲರೂ ಸೇರಿ ಇಬ್ಬರ ಕೈಗಳನ್ನೂ ಬಲವಂತವಾಗಿ ಕುಲುಕಿಸಿ ಕಳಿಸಿಕೊಟ್ಟಿದ್ದರು. ಆದರೆ ಭಜ್ಜಿ ಮತ್ತೆ ಡ್ರೆಸಿಂಗ್



ರೂಮಿಗೆ ನುಗ್ಗಿ ಹೊಡೆಯಲು ಬಂದಾಗ ಬ್ರೆಟ್ ಲೀ ಮತ್ತು ಕೋಚ್ ಟಾಮ್ ಮೂಡಿ ಶ್ರೀಶಾಂತನನ್ನು ಅಲ್ಲಿಂದ ಹೊರಕ್ಕೆ ಕಳಿಸಿದರಂತೆ.

30ರ ಹರೆಯದ ಈ ಕೇರಳದ ಕ್ರಿಕೆಟಿಗ ಮೊದಲೆಲ್ಲ ಮೈದಾನದಲ್ಲಿ ಉಗ್ರರೂಪದ ಆ್ಯಕ್ಷನ್ ತೋರುತ್ತಿದ್ದ. ಆದರೆ ರೆಫರೀಗಳ ಎಚ್ಚರಿಕೆಯ ಬಳಿಕ ಆತನ ಆ್ಯಕ್ಷನ್ ಬದಲಾಯಿತು. ಈಗ ಭಜ್ಜೀ ನಿವೃತ್ತನಾಗುವ ಕಾಲಕ್ಕೆ ಮತ್ತೆ ಶ್ರೀ ಉಗ್ರನಾಗಿದ್ದಾನೆ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65